# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ಕಾರ್ಯಾಲಯ, ಯಾದಗಿರಿ.

**ಅಧಿಸೂಚನೆ ಸಂಖ್ಯೆ ಃ ಎಡಿಎಂಎಸ್ ಃ 2 ಃ 2019, ದಿನಾಂಕ ಃ 03.01.2019.**

**ವಿಷಯ** ಃ ಸಿಪಾಯಿ ಹುದ್ದೆಗಳ ನೇರ ನೇಮಕಾತಿ ಕುರಿತು.

**ಉಲ್ಲೇಖ** ಃ
1) ಕರ್ನಾಟಕ ಉಚ್ಛ ನ್ಯಾಯಾಲಯದ ಪತ್ರದ ಸಂಖ್ಯೆಃಎಲ್‌ಸಿ ಎ.II 128ಃ 2012 ದಿನಾಂಕ ಃ 17.10.2014ರನ್ವಯ ಯಾದಗಿರಿ ಜಿಲ್ಲೆಯ ಹುದ್ದೆಗಳನ್ನು ಮಂಜೂರು ಮಾಡಿದ ಬಗ್ಗೆ.
2) ಕರ್ನಾಟಕ ಉಚ್ಛ ನ್ಯಾಯಾಲಯದ ಪತ್ರದ ಸಂಖ್ಯೆಃಎಲ್‌ಸಿ ಎ.II 128ಃ 2012 ದಿನಾಂಕ ಃ 13.02.2017ರನ್ವಯ ಯಾದಗಿರಿ ಜಿಲ್ಲೆಯ ಹುದ್ದೆಗಳನ್ನು ಮಂಜೂರು ಮಾಡಿದ ಬಗ್ಗೆ.
3) ಕರ್ನಾಟಕ ಅಧೀನ ನ್ಯಾಯಾಲಯಗಳ (ಲಿಪಿಕ ಮತ್ತು ಇತರ ಹುದ್ದೆಗಳ) ( ನೇಮಕಾತಿ ) ನಿಯಮ 1982 ( ತಿದ್ದುಪಡಿ ) ನಿಯಮ 2007.
4) ಕರ್ನಾಟಕ ನಾಗರಿಕ ಸೇವಾ ಸಾಮಾನ್ಯ ನೇಮಕಾತಿ ನಿಯಮ – 1977.
5) ಕರ್ನಾಟಕ ಉಚ್ಛ ನ್ಯಾಯಾಲಯದ ಪತ್ರದ ಸಂಖ್ಯೆ ಃ ಎಲ್‌ಸಿಎ – II 128 ಃ 2012 ದಿನಾಂಕ ಃ 13.02.2017.
6) ಕಚೇರಿ ಟಿಪ್ಪಣಿ ದಿ ಃ 03.01.2019 - ಮಾಡಿದ ಆದೇಶ.

*****

ಯಾದಗಿರಿ ಜಿಲ್ಲಾ ನ್ಯಾಯಾಲಯದಲ್ಲಿ ಖಾಲಿ ಇರುವ **05 ಸಿಪಾಯಿ** ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅಧಿಸೂಚನೆಯಲ್ಲಿ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಃ **15.02.2019** ಸಂಜೆ **5.00** ಗಂಟೆಯೊಳಗೆ.

## I. ಜವಾನರು ( ಸಿಪಾಯಿ )

**ಒಟ್ಟು ಹುದ್ದೆಗಳ ಸಂಖ್ಯೆ ಃ 05**

**ವೇತನ ಶ್ರೇಣಿ ಃ 17000-400-18600-450-20400-500-22400-550-24600-600-27000-650-28950 ಹಾಗೂ ಇತರೆ ಭತ್ಯೆಗಳು.**

7 ನೇ ತರಗತಿಯ ಅಂಕಗಳು ಶ್ರೇಣಿಯಲ್ಲಿದ್ದರೆ ಅದನ್ನು ಅಂಕಗಳಾಗಿ ಪರಿವರ್ತಿಸಿ, ಗರಿಷ್ಟ ಅಂಕಗಳು ಮತ್ತು ಪಡೆದ ಅಂಕಗಳು ಒಟ್ಟು ಶೇಕಡಾವಾರು ನಮೂದು ಇರಬೇಕು ಮತ್ತು ಅಂಕಪಟ್ಟಿಯನ್ನು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರಬೇಕು ಹಾಗೂ ಅಂಕಪಟ್ಟಿಯಲ್ಲಿ ತ್ರೈಮಾಸಿಕ ಅಂಕಗಳಿದ್ದರೆ, ಎಲ್ಲಾ ತ್ರೈಮಾಸಿಕ ಅಂಕಗಳನ್ನು ಕ್ರೋಢೀಕರಿಸಿದ ಅಂಕಪಟ್ಟಿಯನ್ನು ಮೂಲ ಅಂಕಪಟ್ಟಿಯ ಜೊತೆ ಸದರಿ ಅಂಕಪಟ್ಟಿಯನ್ನು ಸಹ ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು ಹಾಗೂ ಅಂಕಪಟ್ಟಿಯು ಕಡ್ಡಾಯವಾಗಿ ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಯವರಿಂದ ಧೃಡೀಕರಿಸಲ್ಪಟ್ಟಿರತಕ್ಕದ್ದು ಮತ್ತು ಸದರಿ ಕ್ಷೇತ್ರ ಶಿಕ್ಷಣಾಧಿಕಾರಿಯವರಿಂದ ಧೃಢೀಕರಿಸಲ್ಪಟ್ಟ ಅಂಕಪಟ್ಟಿಯನ್ನು ಸಂದರ್ಶನದ ಸಮಯದಲ್ಲಿ ತಪ್ಪದೇ ಹಾಜರು ಪಡಿಸತಕ್ಕದ್ದು ತಪ್ಪಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಮೇಲ್ಕಾಣಿಸಿದ 7ನೇ ತರಗತಿಯ ಅಂಕಪಟ್ಟಿಯ ಈ ಅಧಿಸೂಚನೆಯಲ್ಲಿ ನಮೂದಿಸಿದ ಅರ್ಜಿಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

ಮೇಲ್ಕಾಣಿಸಿದ 7ನೇ ತರಗತಿಯ ಅಂಕಗಳನ್ನೊಳಗೊಂಡ ಅಂಕಪಟ್ಟಿಯಾಗಿರಬೇಕು ಮತ್ತು ಬೇರೆ ರೀತಿಯಲ್ಲಿ ಅಂದರೆ ಗ್ರೇಡ ಇದ್ದ ಅಂಕಪಟ್ಟಿಗಳನ್ನು ಲಗತ್ತಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಸೂಚನೆಗಳು :**

1) ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ :**15.02.2019** ರಂದು ಸಂಜೆ **5-00** ಗಂಟೆಯೊಳಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಕಡೆಯ ದಿನಾಂಕವು ಸಾರ್ವಜನಿಕ ರಜೆ ದಿನವಾಗಿದ್ದ ಪಕ್ಷದಲ್ಲಿ ಮುಂದಿನ ಕೆಲಸದ ದಿನಾಂಕ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನವಾಗಿರುತ್ತದೆ.
2) ಭರ್ತಿ ಮಾಡಿದ ಅರ್ಜಿಗಳನ್ನು ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸಬೇಕು.
3) ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಸಂಬಂಧಿತ ಹುದ್ದೆಯ ಲಕೋಟೆಯ ಮೇಲೆ ಕಡ್ಡಾಯವಾಗಿ ತಾವು ಸಲ್ಲಿಸಬಚ್ಛಿಸುವ ಹುದ್ದೆಯ ಹೆಸರನ್ನು ದಪ್ಪ ಅಕ್ಷರಗಳಲ್ಲಿ ತಪ್ಪದೇ ನಮೂದಿಸಬೇಕು.

**ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ**

**ಯಾದಗಿರಿ, ಜಿಲ್ಲೆ : ಯಾದಗಿರಿ.**

